**ಕರ್ನಾಟಕ ಸರ್ಕಾರ**
**(ವಾಣಿಜ್ಯ ತೆರಿಗೆಗಳ ಇಲಾಖೆ)**

**1ನೇ ಏಪ್ರಿಲ್, 2012ರಿಂದ ವಾಣಿಜ್ಯ ತೆರಿಗೆಗಳಲ್ಲಿ ಜಾರಿಗೆ ಬರಲಿರುವ ಮುಖ್ಯ ಬದಲಾವಣೆಗಳು**

**ಮೌಲ್ಯವರ್ಧಿತತೆರಿಗೆ:**
**1. ಈ ಮುಂದಿನ ಸರಕುಗಳನ್ನು 1.4.2012ರಿಂದ 31.3.2013ರವರೆಗೆ ತೆರಿಗೆಯಿಂದ ವಿನಾಯಿತಿಗೊಳಿಸಿದೆ:**
(1) ಭತ್ತ, ಅಕ್ಕಿ ಮತ್ತುಗೋಧಿ.
(2) ಬೇಳೆಕಾಳುಗಳು.
(3) ಅಕ್ಕಿ ಮತ್ತುಗೋಧಿಯ ಹಿಟ್ಟು ಮತ್ತುರವೆ ಹಾಗೂ ಗೋಧಿಯ ಮೈದಾ ಹಿಟ್ಟು.
**2. ಬ್ರೇಲ್ ಕೈಗಡಿಯಾರಗಳ ಮೇಲಿನ ತೆರಿಗೆಯನ್ನುವಿನಾಯಿತಿಗೊಳಿಸಲಾಗಿದೆ:**
**3. ಈ ಮುಂದಿನ ಸರಕುಗಳ ಮೇಲಿನ ತೆರಿಗೆಯನ್ನು ಶೇ.5ಕ್ಕೆ ಇಳಿಸಲಾಗಿದೆ:**
(1) ಬೇಯಿಸಲು ತಯಾರಿರುವಚಪಾತಿ ಮತ್ತು ಪರೋಟ.
(2) ಸರ್ಜಿಕಲ್ ಪಾದರಕ್ಷೆಗಳು.
(3) ಕಪ್ಪು ಹಲಗೆಗಳು.
(4) ಸಿದ್ಧ ಉಡುಪುಗಳ ತಯಾರಿಕೆ ಮತ್ತುಕಸೂತಿ ಕೆಲಸಗಳ ಗುತ್ತಿಗೆಕಾಮಗಾರಿ.
(5) ನಾಫ್ತಾ.
**4. ಈ ಮುಂದಿನ ಸರಕುಗಳ ಮೇಲಿನ ತೆರಿಗೆಯನ್ನು ಶೇ.2ಕ್ಕೆ ಇಳಿಸಲಾಗಿದೆ:**
(1) ಕಚ್ಚಾ ಹತ್ತಿ.
(2) ತುಂಡಾದ ಮತ್ತು ಸಾರ ಹೀರಿದ ಒಣ ಮೆಣಸಿನಕಾಯಿ ಹಾಗೂ ಒಣ ಮೆಣಸಿನಕಾಯಿ ಬೀಜಗಳು ಸೇರಿದಂತೆ ಒಣ ಮೆಣಸಿನಕಾಯಿ.
**5. ಈ ಮುಂದಿನ ಸರಕುಗಳ ಮೇಲಿನ ತೆರಿಗೆಯನ್ನು ಶೇ.1ಕ್ಕೆ ಇಳಿಸಲಾಗಿದೆ:**
(1) (i) ಅಮೂಲ್ಯಅಥವಾಅರೆಅಮೂಲ್ಯ ಹರಳುಗಳನ್ನು ಅಳವಡಿಸಿರುವ ಅಥವಾಇಲ್ಲದಿರುವಚಿನ್ನ, ಬೆಳ್ಳಿ ಮತ್ತುಇತರ ಬೆಲೆಬಾಳುವ ಲೋಹಗಳ ಆಭರಣಗಳು ಮತ್ತು ವಸ್ತುಗಳು; ಮತ್ತು
(ii) ಅಮೂಲ್ಯ ಮತ್ತುಅರೆ-ಅಮೂಲ್ಯ ಹರಳುಗಳ ಮಾರಾಟ.
(2) ಅಮೂಲ್ಯ ಮತ್ತುಅರೆ-ಅಮೂಲ್ಯ ಹರಳುಗಳನ್ನು ಜೋಡಿಸಿದ ಅಥವಾ ಜೋಡಿಸಿರದ ಬೆಲೆ ಬಾಳುವ ಲೋಹಗಳ ಆಭರಣ ಮತ್ತಿತರೆ ವಸ್ತುಗಳ ತಯಾರಿಕೆಅಥವಾ ಸಂಸ್ಕರಣೆ ಮತ್ತು ಸರಬರಾಜು ಮಾಡುವಕಾಮಗಾರಿ ಗುತ್ತಿಗೆಗಳಲ್ಲಿ ಒಳಗೊಂಡ ಸರಕುಗಳ ವರ್ಗಾವಣೆ.
(3) ಹೊರದೇಶಕ್ಕೆ ಪ್ರಯಾಣ ಮಾಡುವ ಹಡಗುಗಳಿಗೆ ಮಾರಾಟ ಮಾಡುವ ಫರ್ನೇಸ್ಆಯಿಲ್.

**6. ಸಿಗರೇಟು, ಸೀಗರ್, ಗುಟ್ಕಾ ಮತ್ತು ಮತ್ತಿತರತಂಬಾಕು ಉತ್ಪನ್ನಗಳ ಮೇಲಿನ ತೆರಿಗೆದರವನ್ನು ಶೇ.15 ರಿಂದ ಶೇ.17ಕ್ಕೆ ಹೆಚ್ಚಿಸಲಾಗಿದೆ:**
**7. ಹೆಚ್‌ಡಿಪಿಇ ಮತ್ತುಇತರೆಪ್ಲಾಸ್ಟಿಕ್‌ನಿಂದ ನೇಯ್ದ ಬಟ್ಟೆಗಳ ಮೇಲೆ ಶೇ.5 ರಷ್ಟುತೆರಿಗೆ ವಿಧಿಸಲಾಗಿದೆ:**

**8. ಇತರೆ ಪರಿಹಾರಗಳು:**
(1) ಪ್ರಥಮ ಮೇಲ್ಮನವಿ ಪ್ರಾಧಿಕಾರ ನೀಡಿದತಡೆಯಾಜ್ಞೆ 240 ದಿನಗಳ ನಂತರತಂತಾನೆರದ್ದಾಗುವಉಪಬಂಧವನ್ನುತೆಗೆದು ಹಾಕಲಾಗಿದೆ.
(2) ಮೇಲ್ಮನವಿಯಲ್ಲಿ ವಿವಾದಿತವಾದತೆರಿಗೆಯೇತರ ಮೊತ್ತಗಳ ಶೇ.50ರಷ್ಟರ ವಸೂಲಿಯನ್ನುತಡೆ ಮಾಡಿಆಜ್ಞೆ ನೀಡಲು ಪ್ರಥಮ ಮೇಲ್ಮನವಿ ಪ್ರಾಧಿಕಾರಗಳಿಗೆ ಅಧಿಕಾರ ನೀಡಲಾಗಿದೆ.
(3) 1.4.2012ರಿಂದ ತೆರಿಗೆಅವಧಿಕೊನೆಗೊಂಡ 5 ವರ್ಷಗಳೊಳಗಾಗಿ ಕರ ನಿರ್ಧರಣೆ/ಮರುಕರನಿರ್ಧರಣೆ ಮಾಡಲು ಸಮಾನ ಕಾಲಮಿತಿ ನಿಗದಿ ಮಾಡಲಾಗಿದೆ. ನೋಂದಣಿ ಪಡೆಯಲುತಪ್ಪಿದಅಥವಾ ಮೋಸದಿಂದತೆರಿಗೆ ವಂಚಿಸುವ ವ್ಯಾಪಾರಿಗಳ ಪ್ರಕರಣಗಳಲ್ಲಿ ಕರ ನಿರ್ಧರಣೆ/ಮರುಕರನಿರ್ಧರಣೆ ಮಾಡಲು 10 ವರ್ಷಗಳ ಕಾಲಮಿತಿ ನಿಗದಿ ಮಾಡಲಾಗಿದೆ.
**9. 2003ರ ಮೌಲ್ಯವರ್ಧಿತತೆರಿಗೆಅಧಿನಿಯಮದಡಿಯಲ್ಲಿಮಾಡಿರುವಇತರೆಮುಖ್ಯ ಬದಲಾವಣೆಗಳು:**
(1)ಯಾವುದೇತೆರಿಗೆಅವಧಿಗೆ ನಂತರದತೆರಿಗೆಅವಧಿಯರಿಟರ್ನ್ಅನ್ನು ಸಲ್ಲಿಸಲು ನಿಗದಿಯಾದ ಕಾಲಮಿತಿಯೊಳಗೆ ಮಾತ್ರ ಪರಿಷ್ಕೃತರಿಟರ್ನ್ ನೀಡಲು ಅವಕಾಶ ಮಾಡಲಾಗಿದೆ. ಆನಂತರ, ಆದರೆ ಸಂಬಂಧಿತತೆರಿಗೆಅವಧಿಯಕೊನೆಯಿಂದ 6 ತಿಂಗಳ ಅವಧಿಯೊಳಗೆ ಪರಿಷ್ಕೃತರಿಟರ್ನ್ ಸಲ್ಲಿಸಲುನಿಯಮಿಸಲಾದ ಪ್ರಾಧಿಕಾರದಿಂದಅನುಮತಿ ಪಡೆಯಬೇಕಾಗುತ್ತದೆ.
(2) ಜಮೆ ಮತ್ತುಖರ್ಚು ಚೀಟಿಗಳನ್ನು ನೀಡುವ ಬಗ್ಗೆ ಇರುವಉಪಬಂಧವನ್ನುತೆಗೆದು ಹಾಕಲಾಗಿದೆ.
(3) ಮೇಲ್ನೋಟಕ್ಕೆಕಂಡು ಬರುವತಪ್ಪನ್ನು ಸರಿಪಡಿಸಲು ಮಾಡಿದಅರ್ಜಿ 60 ದಿನಗಳೊಳಗಾಗಿ ವಿಲೇ ಆಗದಿದ್ದಲ್ಲಿಅಂತಹತಪ್ಪನ್ನು ಸರಿಪಡಿಸಲಾಗಿದೆಎಂದು ಭಾವಿಸುವ ಉಪಬಂಧವನ್ನುತೆಗೆದು ಹಾಕಲಾಗಿದೆ.

(4) ಕ್ರಮಬದ್ಧ ಲೆಕ್ಕಪುಸ್ತಕಗಳನ್ನು ಇಡದತಪ್ಪಿಗಾಗಿರುವದಂಡವನ್ನು ಪ್ರಥಮತಪ್ಪಿಗಾಗಿ ರೂ.2000 ರಿಂದ ರೂ.5000ಕ್ಕೆ ಮತ್ತು ನಂತರದತಪ್ಪಿಗಾಗಿ ರೂ.5000 ರಿಂದ ರೂ.10000ಕ್ಕೆ ಏರಿಸಲಾಗಿದೆ.

(5) ಲೆಕ್ಕಪುಸ್ತಕಗಳನ್ನು ಹಾಜರು ಪಡಿಸದ ಮತ್ತು ಮಾಹಿತಿಯನ್ನುಒದಗಿಸದತಪ್ಪಿಗಾಗಿರುವದಂಡವನ್ನು ರೂ.5000 ರಿಂದ ರೂ.10000ಕ್ಕೆ ಏರಿಸಲಾಗಿದೆ.

(6) 3 ತಿಂಗಳು ಅಥವಾ 2 ತ್ರೈಮಾಸಿಕಗಳಿಗೆ ನಿರಂತರವಾಗಿರಿಟರ್ನ್ ಸಲ್ಲಿಸದ ವ್ಯಾಪಾರಿಗಳ ಮೇಲೆ ಮೊಕದ್ದಮೆ ಹಾಕಲು ಉಪಬಂಧತರಲಾಗಿದೆ.

(7) ಸಾಗಣೆ ಪಾಸ್‌ಅನ್ನುಕಡ್ಡಾಯವಾಗಿ ಪಡೆಯಬೇಕಾದ ಸರಕುಗಳನ್ನು ಅಧಿಸೂಚಿಸಲು ಸರ್ಕಾರ ಮತ್ತುಆಯುಕ್ತರಿಗೆಅಧಿಕಾರ ನೀಡಲಾಗಿದೆ.

(8) ಸಾಗಣೆ ಪಾಸ್‌ನ ವಿವರಗಳನ್ನು, ಸರಕುರಾಜ್ಯದಿಂದ ಹೊರಗೆ ಸಾಗಾಟವಾಗುವ ಮುನ್ನ ಅಧಿಸೂಚಿಸಿದ ವೆಬ್‌ಸೈಟ್‌ನಲ್ಲಿ ನಮೂದಿಸಲು ಉಪಬಂಧತರಲಾಗಿದೆ.

(9) ಗುತ್ತಿಗೆಕಾಮಗಾರಿಯಲ್ಲಿ ಬಳಸಲಾದ ಕನ್ಸೂಮೆಬಲ್‌ಗಳ ಮೇಲೆ ದುಪ್ಪಟ್ಟುಕಡಿತಕ್ಲೇಮನ್ನುತಡೆಯಲುಉಪಬಂಧತಲಾಗಿದೆ.

**II. ಮಾರಾಟತೆರಿಗೆ:**

(1) ಡೀಸೆಲ್ ಮೇಲಿನ ತೆರಿಗೆದರವನ್ನು ಶೇ.18 ರಿಂದ ಶೇ.16.75ಕ್ಕೆ ಇಳಿಸಲಾಗಿದೆ.

(2) 1,25,000 ಕಿಲೋ ಲೀಟರ್‌ವರೆಗೆ ಮೀನುಗಾರರಿಗೆ ಮಾರಾಟವಾಗುವಡೀಸೆಲ್‌ಮೇಲೆತೆರಿಗೆ ವಿನಾಯಿತಿ ನೀಡಲಾಗಿದೆ.

(3) ಹೊರದೇಶಕ್ಕೆ ಪ್ರಯಾಣ ಮಾಡುವ ಹಡಗುಗಳಿಗೆ ಮಾರಾಟ ಮಾಡುವಹೈ ಫ್ಲಾಶ್ ಹೈ ಸ್ಪೀಡ್ ಡೀಸೆಲ್ ಮೇಲಿನ ತೆರಿಗೆಯನ್ನು ಶೇ.1ಕ್ಕೆ ಇಳಿಸಲಾಗಿದೆ.

**III. ಕೃಷಿ ವರಮಾನತೆರಿಗೆ:**

(1) ಪಾಲುದಾರಿಕೆ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ನೀಡಲಾಗಿದೆ.

(2) ಮೇಲ್ಮನವಿ ಪ್ರಾಧಿಕಾರದಆದೇಶದ ವಿರುದ್ಧ ಪುನರಾವಲೋಕನಅರ್ಜಿಯನ್ನು ಸಲ್ಲಿಸಲುಇರುವ ಕಾಲಮಿತಿಯನ್ನು 60 ದಿನಗಳಿಂದ 180 ದಿನಗಳಿಗೆ ಏರಿಸಲಾಗಿದೆ.

**IV. ವಿಲಾಸ ತೆರಿಗೆ:**

(1) ತಾತ್ಕಾಲಿಕ ನಿರ್ಮಿತಿ ಮತ್ತಿತರ ಸ್ಥಳಗಳಲ್ಲಿ ಮದುವೆ ಮತ್ತುಅದಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಹಾಗೂ ಅಧಿಕೃತ, ಸಾಮಾಜಿಕಅಥವಾ ವ್ಯವಹಾರ ಕಾರ್ಯಕ್ರಮಗಳನ್ನು ನಡೆಸಲು ಸ್ಥಳಾವಕಾಶ ನೀಡುವ ಮಾಲೀಕರನ್ನು ಶೇ.10ರ ತೆರಿಗೆಗೆ ಬಾಧ್ಯರನ್ನಾಗಿ ಮಾಡಲಾಗಿದೆ.

(2) ವಿಚಾರ ಸಂಕಿರಣ, ಸಮ್ಮೇಳನ, ಔತಣಕೂಟ ಮತ್ತು ಸಭಾಭವನಗಳಲ್ಲಿ ಅಥವಾಪ್ರದರ್ಶನ ಭವನ ಮತ್ತಿತರ ಸ್ಥಳಗಳಲ್ಲಿ ಮದುವೆ ಮತ್ತುಅದಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಹಾಗೂ ಅಧಿಕೃತ, ಸಾಮಾಜಿಕಅಥವಾ ವ್ಯವಹಾರ ಕಾರ್ಯಕ್ರಮಗಳನ್ನು ನಡೆಸಲು ಸ್ಥಳಾವಕಾಶ ನೀಡುವ ಮಾಲೀಕರನ್ನು ಶೇ.10ರ ತೆರಿಗೆಗೆ ಬಾಧ್ಯರನ್ನಾಗಿ ಮಾಡಲಾಗಿದೆ.

(3) ಮಾಲೀಕರು ಸಲ್ಲಿಸಿದ ರಿಟರ್ನ್‌ಗಳ ಆಧಾರದ ಮೇಲೆ ಸ್ವಯಂಕರನಿರ್ಧರಣೆ ಮಾಡಲುಉಪಬಂಧತರಲಾಗಿದೆ.

**V. ಮನರಂಜನಾತೆರಿಗೆ:**

(1) ಮಾಲೀಕರು ಸಲ್ಲಿಸಿದ ರಿಟರ್ನ್‌ಗಳ ಆಧಾರದ ಮೇಲೆ ಸ್ವಯಂಕರನಿರ್ಧರಣೆ ಮಾಡಲುಉಪಬಂಧತರಲಾಗಿದೆ.

(2) ಹೊಸ ಚಲನಚಿತ್ರ ಮಂದಿರಗಳು ಮತ್ತು ವೀಡಿಯೋ ಪಾರ್ಲರ್‌ಗಳ ಮಾಲೀಕರಿಗೆ ನೋಂದಣಿ ನೀಡಲುಉಪಬಂಧವನ್ನುತರಲಾಗಿದೆ. ಹಾಲಿ ಮಾಲೀಕರಿಗೆತಂತಾನೆ ನೋಂದಣಿ ನೀಡಿಕೆ.

**VI. ವೃತ್ತಿತೆರಿಗೆ:**

(1) ತ್ರೈಮಾಸಿಕ ವಿವರ ಪಟ್ಟಿ ಸಲ್ಲಿಸುವ ಸೌಲಭ್ಯವನ್ನು ಹಿಂತೆಗೆದುಕೊಳ್ಳಲಾಗಿದೆ.

(2) ಮೇಲ್ಮನವಿ ಪ್ರಾಧಿಕಾರದಆದೇಶದ ವಿರುದ್ಧ ಪುನರಾವಲೋಕನಅರ್ಜಿಯನ್ನು ಸಲ್ಲಿಸಲುಇರುವ ಕಾಲಮಿತಿಯನ್ನು60 ದಿನಗಳಿಂದ 180 ದಿನಗಳಿಗೆ ಏರಿಸಲಾಗಿದೆ.

**VII. ಪ್ರವೇಶತೆರಿಗೆ:**

ಮೇಲ್ಮನವಿ ಪ್ರಾಧಿಕಾರದಆದೇಶದ ವಿರುದ್ಧ ಪುನರಾವಲೋಕನಅರ್ಜಿಯನ್ನು ಸಲ್ಲಿಸಲುಇರುವ ಕಾಲಮಿತಿಯನ್ನು120 ದಿನಗಳಿಂದ 180 ದಿನಗಳಿಗೆ ಏರಿಸಲಾಗಿದೆ.

**VIII. ಜೂಜುತೆರಿಗೆ:**

ಬೆಂಗಳೂರು ಮತ್ತು ಮೈಸೂರಿನಲ್ಲಿ ವ್ಯವಹಾರ ಮಾಡುತ್ತಿರುವ ಖಾಸಗೀ ಬುಕ್‌ಮೇಕರ್‌ಗಳು ಸಂದಾಯ ಮಾಡಬೇಕಾದ ಕನಿಷ್ಠ ತೆರಿಗೆ ಮೊತ್ತವನ್ನುಏರಿಸಲಾಗಿದೆ.

**ತಿದ್ದುಪಡಿಗಳು ಮತ್ತು ಅಧಿಸೂಚನೆಗಳ ಹೆಚ್ಚಿನವಿವರಗಳಿಗೆ ಇಲಾಖಾ ವೆಬ್‌ಸೈಟ್http://ctax.kar.nic.inಗೆ ದಯವಿಟ್ಟು ಭೇಟಿ ನೀಡಿ.**

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು.